

# ಕ್ರೂಸರ್ ಬೈಕ್‌ಗಳ ಭರಾಟೆ!

## ಬೆಂಗಳೂರಿಗೂ ಬಂತು ನೋಡಿ- 35 ಲಕ್ಷ ರೂಪಾಯಿಯ ಬೈಕ್!

■ ವಿಶಾಖ

ಮಹಾತ್ಮ ಗಾಂಧಿ ರಸ್ತೆಯ ಸಪಾಟಾದ ಡಾಂಬರಿನ ಮೇಲೆ ರಾತ್ರೋ ರಾತ್ರಿ ಮಿಂಚಿನಂತೆ ಸರಿದಾಡುವ ಸರಬರ ಬೈಕುಗಳ ಸದ್ದಿನ ಸುದ್ದಿ ಯುವ ಕಿವಿಗಳ ಮೇಲೆ ಈಚೆಗೆ ಹೆಚ್ಚಾಗಿಯೇ ಬೀಳುತ್ತಿದೆ. ಹಾಗೆ ಮಿಂಚುತ್ತಾ ನುಗ್ಗುವ ವೇಗದ ಮೋಟಾರು ಬೈಕ್‌ಗಳಿಗೆ 'ಕ್ರೂಸರ್ ಬೈಕು'ಗಳೆಂಬ ಹೆಮ್ಮೆಯ ಹೆಸರಿದೆ. ಭಾರತದಲ್ಲಿನ ಅಂಥ ಅಪರೂಪದ ಬೈಕುಗಳ ಲೋಕಕ್ಕೆ ಕಾಲಿಟ್ಟಿದೆ ಹರ್ಲಿ- ಡೇವಿಡ್‌ಸನ್.

ಎಚ್-ಡಿ ಎಂಬ ಚುಟುಕು ಹೆಸರಿನಿಂದಲೇ ಜನಪ್ರಿಯವಾಗಿರುವ ಈ ಕ್ರೂಸರ್ ಬೈಕುಗಳ ಡೀಲರ್‌ಶಿಪ್ ಪಡೆಯಲು ಹತ್ತು ತಿಂಗಳ ಹಿಂದೆಯೇ ಕಸರತ್ತು ಶುರುವಾಗಿತ್ತು. ಈಗ ಭಾರತದ ಮಾರುಕಟ್ಟೆಗೆ ಅವು ಲಗ್ಗೆಇಡಲು ಕ್ಷಣಗಣನೆ ಶುರುವಾಗಿದೆ.

ಎಂಟು ನೂರರಿಂದ ಸಾವಿರದ ಇನ್ನೂರಕ್ಕೂ ಹೆಚ್ಚು ಕ್ಯೂಬಿಕ್ ಸಾಮರ್ಥ್ಯದ (ಸಿಸಿ) ಎಂಜಿನ್‌ಗಳನ್ನು ಒಳಗೊಂಡ ಎಚ್-ಡಿ ಬೈಕುಗಳ ಹನ್ನೆರಡು ಮಾದರಿಗಳು ಭಾರತದ ಮಾರುಕಟ್ಟೆಯಲ್ಲಿ ಲಭ್ಯ. ಈಗ ಬುಕ್ ಮಾಡಿದರೆ ಜೂನ್ ಹೊತ್ತಿಗೆ ಅದರ ಮೇಲೆ ಕೂರುವ ಭಾಗ್ಯ.

ಸ್ಪೋರ್ಟ್‌ಸ್ಟರ್, ಡೈನಾ, ಸಾಫ್ಟ್‌ಟೇಲ್, ವಿ-ರಾಡ್, ಸಿವಿಒ ಹೀಗೆ ಬಗೆಬಗೆಯ ಪ್ರಭೇದಕ್ಕೆ ಸೇರಿದ ಹನ್ನೆರಡು ವಿಧದ ಬೈಕುಗಳು ಬೆಂಗಳೂರಿನ ಒಂದೇ ಶೋರೂಮ್‌ನಲ್ಲಿ ಉಂಟು. ಟಸ್ಕರ್ ಹರ್ಲಿ-ಡೇವಿಡ್‌ಸನ್ ಹೆಸರಿನ ಶೋರೂಮ್‌ನ ಒಡೆಯ ಶ್ರೀನಿವಾಸ ರೆಡ್ಡಿ. ಖುದ್ದು ಮೋಟಾರ್ ಬೈಕ್ ಮೋಹಿಯಾಗಿರುವ ಅವರು ಆಸ್ಟ್ರೇಲಿಯಾದಲ್ಲಿ ಎಚ್-ಡಿ ಕಂಪೆನಿಯಲ್ಲೇ ಕೆಲಸ ಮಾಡಿದ ಅನುಭವ ಪಡೆದಿದ್ದಾರೆ. ಬೆಂಗಳೂರಿನಲ್ಲಿ ಬೈಕು ಕೊಳ್ಳಬಯಸುವವರು 98443-23232 ನಂಬರಿಗೆ ಫೋನಾಯಿಸಬಹುದು.

ಎಂಟುನೂರು ಚಿಲ್ಲರೆ ಸಿಸಿ ಸಾಮರ್ಥ್ಯದ ಎಂಜಿನ್‌ನ ಬೈಕ್‌ಗಳ ಎಕ್ಸ್ ಶೋರೂಮ್ ಬೆಲೆ 6 ಲಕ್ಷ 95 ಸಾವಿರ ರೂಪಾಯಿಯಿಂದ ಶುರುವಾಗುತ್ತದೆ. ಸಾವಿರದೆಂಟು ನೂರು ಸಿಸಿ ಸಾಮರ್ಥ್ಯದ ಸಿವಿಒ ಮಾದರಿಯ ಬೈಕಿನ ಬೆಲೆ 34 ಲಕ್ಷದ 95 ಸಾವಿರ ರೂಪಾಯಿ! ಕಾಸಿಗೆ ತಕ್ಕಂತೆ ಶಕ್ತಿ, ನೋಟ ಇರುವ ಬೈಕುಗಳಿವು.

ಅಮೆರಿಕದಲ್ಲಿ 1901ರಲ್ಲಿ ವಿಲಿಯಮ್ ಎಸ್.ಹರ್ಲಿ ಎಂಬ 21 ವಯಸ್ಸಿನ ಹುಡುಗ 116 ಸಿಸಿ ಎಂಜಿನ್ ತಯಾರಿಸಿ ಸೈಕಲ್‌ಗೆ ಅಳವಡಿಸಿದ. ಅವನಿಗೆ ಸಾಥ್ ನೀಡಿದ್ದು ಗೆಳೆಯ ಆರ್ಥರ್ ಡೇವಿಡ್‌ಸನ್. ಆರ್ಥರ್‌ನ ಅಣ್ಣ ವಾಲ್ಟರ್ ಡೇವಿಡ್‌ಸನ್ ಆ ಎಂಜಿನ್ನನ್ನು ಇನ್ನಷ್ಟು ಅಭಿವೃದ್ಧಿ ಪಡಿಸಿ ಬೈಕು ತಯಾರಿಸುವ ಕನಸಿಗೆ ರೆಕ್ಕೆ ಹಚ್ಚಿದ. ಹಾಗೆ ಶುರುವಾದ ಪ್ರಯೋಗ 1920ರ ಹೊತ್ತಿಗೆ ವಿಶ್ವದಲ್ಲೇ ಅತಿ ಹೆಚ್ಚು ಮಾರಾಟವಾಗುವ ಬೈಕುಗಳನ್ನು ತಯಾರಿಸುವ ಕಂಪೆನಿಯ ಹುಟ್ಟಿಗೆ ಕಾರಣವಾದೀತೆಂದು ಖುದ್ದು ವಿಲಿಯಮ್ ಹರ್ಲಿಯೂ ಊಹಿಸಿರಲಿಕ್ಕಿಲ್ಲ.

ಐಸಿಐಸಿಐ ಬ್ಯಾಂಕಿನ ಜೊತೆ ಎಚ್-ಡಿ ಕಂಪೆನಿಯು ಕೈಜೋಡಿಸಿದ್ದು ಬೈಕುಗಳನ್ನು ಕೊಳ್ಳಲು ವಾರ್ಷಿಕ 11 ಪ್ರತಿಶತ ಬಡ್ಡಿ ದರದಲ್ಲಿ ಸಾಲ ಕೂಡ ಲಭ್ಯವಿದೆ. ಐದು ವರ್ಷದೊಳಗೆ ಸಾಲ ತೀರಿಸಬೇಕೆಂಬುದು ಷರತ್ತು. ಮುಂಗಡ 50 ಸಾವಿರ ರೂ. ನೀಡಿ ಬಯಕೆಯ ಬೈಕನ್ನು ಬುಕ್ ಮಾಡಬಹುದು. ಆಮದು ಸುಂಕ, ತೆರಿಗೆ ಎಲ್ಲಾ ಉಸಾಬರಿಗಳನ್ನು ಡೀಲರ ನೋಡಿಕೊಳ್ಳುವುದರಿಂದ ಗ್ರಾಹಕರಿಗೆ ತಲೆಬಿಸಿ ಇಲ್ಲ.

ಭಾರತದಲ್ಲಿ 800 ಸಿಸಿಗೂ ಹೆಚ್ಚು ಸಾಮರ್ಥ್ಯದ ಬೈಕುಗಳು ಕಳೆದ ವರ್ಷ ಒಂದು ಸಾವಿರದಷ್ಟು ಬಿಕರಿಯಾಗಿದ್ದವು. ಮುಂದೆ 400, 600 ಸಿಸಿ ಸಾಮರ್ಥ್ಯದ ನಾಲ್ಕು ಲಕ್ಷ ರೂಪಾಯಿಯಷ್ಟು ಬೆಲೆಯ ಬೈಕುಗಳನ್ನು ಮಾರುಕಟ್ಟೆಗಿಳಿಸುವ ಯೋಚನೆಯೂ ಕಂಪೆನಿಗೆ ಉಂಟು. ಹಾಗಾಗಿ ಎಚ್-ಡಿ ಇಲ್ಲಿನ ಮಾರುಕಟ್ಟೆಯನ್ನು ಕಣ್ಣಗಲಿಸಿಕೊಂಡು ನೋಡುತ್ತಿದೆ. ■

